ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 32ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

(ವಿಶೇಷ ಪರಿಷತ್‌ಸಭೆ)

ದಿನಾಂಕ: 06–12–2019ರಂದು ಶುಕ್ರವಾರ

ಮಧ್ಯಾಹ್ನ: 2.00 ರಿಂದ 6.00 ಗಂಟೆಗೆ

: ಸ್ಥಳ :

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಮ್ಮೇಳನ ಸಭಾಂಗಣ,
ಗಾಂಧಿನಗರ, ಬೆಂಗಳೂರು (ಫ್ರೀಡಂ ಪಾರ್ಕ್ ಹಿಂಭಾಗ)

ಕರ್ನಾಟಕ ಸರ್ಕಾರ
# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
# HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

ನಿರ್ದೇಶಕರ ಕಚೇರಿ 01 ಹಿಮ್ಸ್, ಹಾಸನ

## 32ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು (ವಿಶೇಷ ಪರಿಷತ್ ಸಭೆ)

ದಿನಾಂಕ:06-12-2019 ಶುಕ್ರವಾರ, ಮಧ್ಯಾಹ್ನ: 2.00ರಿಂದ 6.00ಗಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಮ್ಮೇಳನ ಸಭಾಂಗಣ, ರಾಮಚಂದ್ರ ರೋಡ್, ಗಾಂಧಿನಗರ, ಬೆಂಗಳೂರು (ಫ್ರೀಡಂ ಪಾರ್ಕ್ ಹಿಂಭಾಗ) ಇಲ್ಲಿ ಸನ್ಮಾನ್ಯ, ಡಾ.ಅಶ್ವಥ್‌ನಾರಾಯಣ.ಸಿ.ಎನ್., ಮಾನ್ಯ ಉಪ ಮುಖ್ಯ ಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 32ನೇ ಆಡಳಿತ ಮಂಡಳಿ (ವಿಶೇಷ ಪರಿಷತ್ ಸಭೆ) ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ: 11** **ಹಾಜರಿದ್ದ ಸದಸ್ಯರ ಸಂಖ್ಯೆ:07**

| | | | |
|---|---|---|---|
| 01 | ಮಾನ್ಯ ಉಪ ಮುಖ್ಯ ಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ,<br>ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 06 | ಮಾನ್ಯ ಉಪ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ),<br>ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ,<br>6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | -- |
| 08 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 09 | ಮಾನ್ಯ ಎನ್. ರಮೇಶ್.<br>ಯೆಲವನಹಳ್ಳಿ ಗ್ರಾಮ, ದೊಡ್ಡಮರಹಳ್ಳಿ ಪೋಸ್ಟ್,<br>ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.<br>ಮೊಬೈಲ್ ನಂ.9845221343, 9141132416 | ಸದಸ್ಯರು<br>(ಸಾಮಾಜಿಕ ಕ್ಷೇತ್ರ) | ಹಾಜರಿರುತ್ತಾರೆ |
| 10 | ಕಾರ್ಯಪಾಲಕ ನಿರ್ದೇಶಕರು,<br>ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್,<br>ಕರ್ನಾಟಕ ಸರ್ಕಾರ, ಬೆಂಗಳೂರು | ವಿಶೇಷ<br>ಆಹ್ವಾನಿತರು | -- |
| 11 | ಮಾನ್ಯ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ<br>ಕಾರ್ಯದರ್ಶಿ | ಹಾಜರಿರುತ್ತಾರೆ |

| ಕ್ರ.ಸಂ. | ವಿಷಯ | ವಿಷಯ |
|---|---|---|
| 01 | ದಿನಾಂಕ:06-1-2018 ರಂದು ನಡೆದ 31ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವುದು. | ದಿನಾಂಕ:06-01-2018ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ 31ನೇ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳಿಗೆ ಸಂಸ್ಥೆಯಿಂದ ವಹಿಸಿರುವ ಕ್ರಮಗಳ ಅನುಪಾಲನಾ ವರದಿಯನ್ನು ಓದಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಅನುಮೋದಿಸಲಾಯಿತು. |
| 02 | ಸಂಸ್ಥೆಯ 19 ರಿಂದ 21ರವರೆಗಿನ ಆರ್ಥಿಕ ಸಮಿತಿ ಸಭೆಗಳ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ದಿನಾಂಕ:21-05-2018ರ 19ನೇ ಆರ್ಥಿಕ ಸಮಿತಿ ಸಭೆ, ದಿನಾಂಕ:20-12-2018ರ 20ನೇ ಆರ್ಥಿಕ ಸಮಿತಿ ಸಭೆ, ದಿನಾಂಕ:10-07-2019ರ 21ನೇ ಆರ್ಥಿಕ ಸಮಿತಿ ಸಭೆಗಳು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ ಇಲಾಖೆ), ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಸಿದ್ದು ಸದರಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸುವುದರ ಜೊತೆಗೆ ಲೆಕ್ಕ ಶೀರ್ಷಿಕೆ 103 ಹಾಗೂ 115ರಲ್ಲಿ ಅನುದಾನ ಕೊರತೆಯಾಗಿರುವುದರಿಂದ ಔಷಧಿ ಬಿಲ್‌ಗಳು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಪಾವತಿ ತೀವ್ರ ಸಮಸ್ಯೆಯಾಗಿದೆ ಎಂದು ನಿರ್ದೇಶಕರು ಸಭೆಯ ಗಮನಕ್ಕೆ ತಂದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ 19 ರಿಂದ 21 ರವರೆಗಿನ ಆರ್ಥಿಕ ಸಮಿತಿ ಸಭೆಗಳ ಸಭಾ ನಡವಳಿಗಳನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. ಹಾಗೂ ಕೊರತೆ ಇರುವ ಅನುದಾನವನ್ನು ತಾತ್ಕಾಲಿಕವಾಗಿ ಸದರಿ ಉದ್ದೇಶಕ್ಕೆ ಯೂಸರ್ಸ್ ನಿಧಿಯಿಂದ ಭರಿಸಿ ಸರ್ಕಾರದಿಂದ ಅನುದಾನ ಬಿಡುಗಡೆಯಾದ ನಂತರ ಮರು ಹೊಂದಾಣಿಕೆ ಮಾಡಿಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 03 | ಸಂಸ್ಥೆಯ 20 ರಿಂದ 26ರವರೆಗಿನ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ದಿನಾಂಕ:13-03-2018ರ 20ನೇ ಖರೀದಿ ಸಮಿತಿ ಸಭೆ, ದಿನಾಂಕ:26-04-2018ರ 21ನೇ ಖರೀದಿ ಸಮಿತಿ ಸಭೆ, ದಿನಾಂಕ:06-06-2018ರ 22ನೇ ಖರೀದಿ ಸಮಿತಿ ಸಭೆ, ದಿನಾಂಕ:08-01-2019ರ 23ನೇ ಖರೀದಿ ಸಮಿತಿ ಸಭೆ, ದಿನಾಂಕ:22-2-2019ರ 24ನೇ ಖರೀದಿ ಸಮಿತಿ ಸಭೆ, ದಿನಾಂಕ:10-06-2019ರ 25ನೇ ಖರೀದಿ ಸಮಿತಿ ಸಭೆ, ದಿನಾಂಕ:23-08-2019ರ 26ನೇ ಖರೀದಿ ಸಮಿತಿ ಸಭೆ ಮೇಲ್ಕಂಡ ಸಭೆಗಳು ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆಸಿದ್ದು ಸದರಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ 20 ರಿಂದ 26 ರವರೆಗಿನ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 04 | ಡಾ.ಸುಧಾ.ಟಿ.ಆರ್. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ | ಡಾ.ಸುಧಾ.ಟಿ.ಆರ್. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಮಾಡುವುದರ ಬಗ್ಗೆ ಹಾಗೂ ಸದರಿಯವರ ವಿರುದ್ಧ ಆರೋಪಗಳಿಗೆ ಸಂಬಂಧಿಸಿದಂತೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | ಮಾಡುವ ಬಗ್ಗೆ. | ವಿಚಾರಣಾಧಿಕಾರಿಗಳು ವಿಚಾರಣೆ ಮಾಡಿ ಸಲ್ಲಿಸಿರುವ ವರದಿಯನ್ನು ಪುನರ್ ಪರಿಶೀಲನೆ ಮಾಡಲು ಮತ್ತೊಮ್ಮೆ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಸರ್ಕಾರದಿಂದ<br><br>ಬಂದಿರುವ ಪತ್ರ ಸಂಖ್ಯೆ:HFW /107/ KVM/ 2013, ದಿನಾಂಕ:4-12-2019ರಂತೆ ವಿಚಾರಣಾಧಿಕಾರಿಗಳು ಸಲ್ಲಿಸಿದ್ದ ಈ ಕೆಳಕಂಡ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>**<u>ಆರೋಪ (1) :</u>** ಡಾ. ಸುಧಾ.ಟಿ.ಆರ್. ರವರು ಗೃಹ ವೈದ್ಯರಿಂದ ಸೇವಾವಧಿ ಪೂರ್ಣ ಪ್ರಮಾಣ ಪತ್ರ ನೀಡಲು ತಲಾ ರೂ.500/- ಗಳನ್ನು ಹಾಗೂ ಗೃಹ ವೈದ್ಯರಿಂದ ಮ್ಯಾನ್ಯುಯಲ್ ಖರೀದಿಸಲು ರೂ.300/-ಸೇರಿದಂತೆ ಒಟ್ಟು ರೂ.37,000/- ಸಾವಿರಗಳನ್ನು ವಸೂಲಿ ಮಾಡಿರುವ ಆರೋಪವು ರುಜುವಾತಾಗಿದೆಯೆಂದು.<br>**<u>ಆರೋಪ (2) :</u>** ಮೊದಲನೇ ಮತು 2ನೇ ಬ್ಯಾಚ್ ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳಿಂದ ಪರೀಕ್ಷಾ ವೆಚ್ಚಕ್ಕಾಗಿ ಅಟೆಂಡರ್ ಶ್ರೀ. ರಘುರವರ ಮುಖಾಂತರ ರೂ.150/- ವಸೂಲು ಮಾಡಲಾಗಿದೆ ಎಂಬ ಆರೋಪವು ರುಜುವಾತಾಗಿಲ್ಲವೆಂದು.<br>**<u>ಆರೋಪ (3) :</u>** ತಮ್ಮ ಅಧೀನ ಬರುವ ವೈದ್ಯ ಸಿಬ್ಬಂದಿಗಳ ಮೇಲೆ ಸಾರ್ವಜನಿಕ ದೂರುಗಳು ಇರುವುದಿಲ್ಲ, ಮತ್ತು ಆರೋಗ್ಯದಿಂದ ಇದ್ದರೂ ಸಹ ಸದರಿ ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಯಲ್ಲಿ ಸಾಧಾರಣಾ ಮತ್ತು ಸಾಧಾರಣಕ್ಕಿಂತ ಕಡಿಮೆ ಎಂದು ನಮೂದಿಸಿ ನೌಕರರಿಗೆ ಪ್ರತಿಕೂಲವಾಗದಂತೆ ವರದಿ ಬರೆದಿರುವ ಆರೋಪವು ರುಜುವಾತಾಗಿದೆಯೆಂದು.<br>**<u>ಆರೋಪ (4) :</u>** ಡಾ. ನಿರ್ಮಲ ದೊರೆಸ್ವಾಮಿ, ಸಹಾಯಕ ಪ್ರಾಧ್ಯಾಪಕರು ಇವರ ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರಿಗೆ ಇವರ ಕಾರ್ಯನಿರ್ವಹಣಾ ವರದಿಯಲ್ಲಿ ದಿನಾಂಕ:5-11-2010ಕ್ಕೆ ಬದಲಾಗಿ ದಿನಾಂಕ:5-10-2013 ಎಂದು ತಪ್ಪು ಮಾಹಿತಿ ನೀಡಿರುವ ಆರೋಪವು ರುಜುವಾತಾಗಿದೆಯೆಂದು.<br>**<u>ಆರೋಪ (5) :</u>** ದಿನಾಂಕ: 18-10-2012ರಂದು ಆಲೂರು ತಾಲ್ಲೂಕು, ಚನ್ನಪುರ ಗ್ರಾಮದ ಪ್ರಕಾಶ್‌ರವರ ಹೆಂಡತಿ ಶ್ರೀಮತಿ. ಆಶಾ ಇವರು ಹೆರಿಗೆಗಾಗಿ ದಾಖಲಾಗಿದ್ದು, |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ದಿನಾಂಕ:19-10-2012ರಂದು ಮರಣ ಹೊಂದಿರುತ್ತಾರೆ. ಕೇಸ್ ಶೀಟ್‌ನ ಮೂಲ ಪ್ರತಿ ಮತ್ತು ಆ ದಿನ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಿಳಾಸ ಕೇಳಿ ಹಾಸನ ಅರಕ್ಷಕ ಠಾಣೆ, ಅರಕ್ಷಕ ಉಪನಿರೀಕ್ಷಕರು, ಜಿಲ್ಲಾ ಶಸ್ತ್ರಚಿಕಿತ್ಸಕರಿಗೆ ದಿನಾಂಕ: 20-10-2012ರಂದುಪತ್ರ ಬರೆದಿದ್ದು, ಈ ಪತ್ರಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಉತ್ತರ ನೀಡಬೇಕಾಗಿದ್ದು, ಜಿಲ್ಲಾ ಶಸ್ತ್ರಚಿಕಿತ್ಸಕರ ಗಮನಕ್ಕೆ ತರದೇ ದಿನಾಂಕ:7-11-2012ರಂದು ಅರಕ್ಷಕ ನಿರೀಕ್ಷಕರಿಗೆ ವೈದ್ಯರ ಮಾಹಿತಿಯನ್ನು ತಪ್ಪಾಗಿ ನೀಡಿ ಕೇಸ್‌ಶೀಟ್‌ನ ಮೂಲ ದಾಖಲೆಯನ್ನು ಆಸ್ಪತ್ರೆಯ ರೇಕಾರ್ಡ್ ವಿಭಾಗದಿಂದ ಪಡೆಯುವುದೆಂದು ತಿಳಿಸಿರುವ ಆರೋಪವು ಭಾಗಶ: ರುಜುವಾತಾಗಿದೆಯೆಂದು ವಿಚಾರಣಾಧಿಕಾರಿಗಳು ನೀಡಿರುವ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮಾಹಿತಿಗೆ ತಂದರು.<br>**ಸದರಿ ಆರೋಪಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಯಿತು.**<br>**ಆರೋಪ 1ಕ್ಕೆ ಸಂಬಂಧಿಸಿದಂತೆ:** 2012ನೇ ಸಾಲಿನ ಅಂತಿಮ ವರ್ಷದ ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳು ಯಾವ ದಿನಾಂಕದಂದು, ಯಾವ ಸ್ಥಳದಲ್ಲಿ, ಯಾವ ಸಮಯದಲ್ಲಿ ಹಣವನ್ನು ನೀಡಿರುವರು ಎಂಬ ಬಗ್ಗೆ ಅನುಬಂಧ-04ರನ್ವಯ ಯಾವುದೇ ಸಾಕ್ಷಿ ನೀಡಿರುವ ಬಗ್ಗೆ ವಿಚಾರಣಾ ವರದಿಯಲ್ಲಿ ಉಲ್ಲೇಖಿಸದಿರುವುದು ಪ್ರಶ್ನಾರ್ಹವಾಗಿದೆ.<br>**ಆರೋಪ 2ಕ್ಕೆ ಸಂಬಂಧಿಸಿದಂತೆ:** ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಗಳ ವರದಿಯಲ್ಲಿ ಆರೋಪ ರುಜುವಾತಾಗಿಲ್ಲ.<br>**ಆರೋಪ 3ಕ್ಕೆ ಸಂಬಂಧಿಸಿದಂತೆ:** ತಮ್ಮ ಅಧೀನ ವೈದ್ಯಕೀಯ ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಯಲ್ಲಿ ನೌಕರರಿಗೆ ಪ್ರತಿಕೂಲವಾಗಿದಂತಹ ವರದಿ ಬರೆದಿದ್ದರೂ ಸಹ ಸಂಬಂಧ ಪಟ್ಟ ನೌಕರರು ಮೇಲ್ಮನವಿ ಹಾಗೂ ಪುನರ್ ಪರಿಶೀಲನೆ ಕೋರಿ ಸಂಬಂಧಿತ ಪ್ರಾಧಿಕಾರಿಗಳಿಗೆ ಮನವಿ ಸಲ್ಲಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಿರುವುದರಿಂದ ಪ್ರತಿಕೂಲ ಷರಾ ಬರೆದಿರುವುದರಿಂದ ಕಾರಣಗಳನ್ನು ಮುಂದಿಟ್ಟುಕೊಂಡು ವಾರ್ಷಿಕ ಕಾರ್ಯನಿರ್ವಹಣೆಯನ್ನು ಬರೆದಿರುವ ಅಧಿಕಾರಿಯ ಮೇಲೆ ದೋಷಾರೋಪಣೆ ಹೊರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ ಆರೋಪವು ರುಜುವಾತಾಗಿದೆ ಎಂದು ವಿಚಾರಣಾಧಿಕಾರಿಗಳು ವರದಿ ಮಾಡಿರುವುದು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಪ್ರಶ್ನಾರ್ಹವಾಗಿದೆ.<br>**ಆರೋಪ 4ಕ್ಕೆ ಸಂಬಂಧಿಸಿದಂತೆ:** ಡಾ.ನಿರ್ಮಲ ದೊರೆಸ್ವಾಮಿಯವರ ಕಾರ್ಯ ನಿರ್ವಾಹಣಾ ವರದಿಯನ್ನು ಕರ್ನಾಟಕ ಮೆಡಿಕಲ್ ಕೌನ್ಸಿಲ್, ಬೆಂಗಳೂರು ಇಲ್ಲಿಗೆ ಸಲ್ಲಿಸುವಾಗ ಸಂಸ್ಥೆಯಲ್ಲಿ ದಿನಾಂಕ:5-11-2010 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂಬುದರ ಬದಲಿಗೆ ದಿನಾಂಕ: 5-10-2013 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ಬರೆದು ಕರ್ತವ್ಯ ಲೋಪವೆಸಗಿರುತ್ತಾರೆಂದು ವಿಚಾರಣಾಧಿಕಾರಿಗಳು ಆರೋಪ ಮಾಡಿರುವುದು ಸರಿಯಷ್ಟೆ ಆದರೆ, ಬೆರಳಚ್ಚು ದೋಷದಿಂದ ಈ ರೀತಿಯ ತಪ್ಪು ಕಂಡು ಬಂದಿರುತ್ತದೆ. ಒಂದು ವೇಳೆ ದಿನಾಂಕ ತಪ್ಪಾಗಿದೆ ಎಂದು ಕಂಡು ಬಂದಲ್ಲಿ ಸಂಸ್ಥೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲು ಅವಕಾಶವಿದೆ. ದಿನಾಂಕದ ತಪ್ಪು ಮಾಹಿತಿ ನೀಡಿದ್ದಾರೆಂದು ಭಾವಿಸಿದರೂ ಸಹ ಇದು ತೀವ್ರ ಸ್ವರೂಪದ ದುರ್ನಡತೆಯಾಗಿರುವುದಿಲ್ಲ. ಇದರಿಂದ ಯಾರಿಗೂ ಯಾವುದೇ ರೀತಿಯ ಆರ್ಥಿಕ / ಆಡಳಿತಾತ್ಮಕ ನಷ್ಟ ಉಂಟಾಗುವುದಿಲ್ಲ ಆದುದರಿಂದ ಈ ಆರೋಪವು ರುಜುವಾತಾಗಿದೆ ಎಂದು ವಿಚಾರಣಾಧಿಕಾರಿಗಳು ವರದಿ ಮಾಡಿರುವುದು ಪ್ರಶ್ನಾರ್ಹವಾಗಿದೆ.<br>**ಆರೋಪ 5ಕ್ಕೆ ಸಂಬಂಧಿಸಿದಂತೆ:** ದಿನಾಂಕ:18-10-2012ರಂದು ಆಲೂರು ತಾಲ್ಲೂಕು, ಚನ್ನಪುರ ಗ್ರಾಮದ ಪ್ರಕಾಶ್‌ರವರ ಹೆಂಡತಿ ಶ್ರೀಮತಿ.ಆಶಾ ಇವರು ಹೆರಿಗೆಗಾಗಿ ದಾಖಲಾಗಿದ್ದು, ದಿನಾಂಕ:19-10-2012ರಂದು ಮರಣ ಹೊಂದಿರುತ್ತಾರೆ. ಕೇಸ್ ಶೀಟ್‌ನ ಮೂಲ ಪ್ರತಿ ಮತ್ತು ಆ ದಿನ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಿಳಾಸ ಕೇಳಿ ಹಾಸನ ಅರಕ್ಷಕ ಠಾಣೆ, ಅರಕ್ಷಕ ಉಪನಿರೀಕ್ಷಕರು, ಜಿಲ್ಲಾ ಶಸ್ತ್ರ ಚಿಕಿತ್ಸಕರಿಗೆ ದಿನಾಂಕ: 20-10-2012ರಂದು ಪತ್ರ ಬರೆದಿದ್ದು, ಈ ಪತ್ರಕ್ಕೆ ಜಿಲ್ಲಾ ಶಸ್ತ್ರಚಿಕಿತ್ಸಕರು ಉತ್ತರ ನೀಡಬೇಕಾಗಿದ್ದು, ಜಿಲ್ಲಾ ಶಸ್ತ್ರಚಿಕಿತ್ಸಕರ ಗಮನಕ್ಕೆ ತರದೇ ದಿನಾಂಕ:7-11-2012ರಂದು ಅರಕ್ಷಕ ನಿರೀಕ್ಷಕರಿಗೆ ವೈದ್ಯರ ಮಾಹಿತಿಯನ್ನು ತಪ್ಪಾಗಿ ನೀಡಿ ಕೇಸ್‌ಶೀಟ್‌ನ ಮೂಲ ದಾಖಲೆಯನ್ನು ಆಸ್ಪತ್ರೆಯ ರೇಕಾರ್ಡ್ ವಿಭಾಗದಿಂದ ಪಡೆಯುವುದೆಂದು ತಿಳಿಸಿರುವುದು. ಭಾಗಶ: ರುಜುವಾತಾಗಿದೆ ಎಂದು ವಿಚಾರಣಾಧಿಕಾರಿಗಳು ತಿಳಿಸಿದ್ದರೂ ಸಹ ಪೊಲೀಸ್ ಇಲಾಖೆಗೆ ಅಗತ್ಯವಿರುವ ಮಾಹಿತಿಗಳನ್ನು ಸಲ್ಲಿಸಲು ವಿಳಂಬಕ್ಕೆ ಅವಕಾಶ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
| --- | --- | --- |
| | | ಮಾಡಿಕೊಡದಂತೆ ಕ್ರಮ ಕೈಗೊಂಡಿರುವುದು ಗಮನಾರ್ಹವಾದ ಆರೋಪವಾಗಿರುವುದಿಲ್ಲ. ಮುಂದುವರೆದು ಮೇಲ್ಕಂಡ ಆರೋಪಗಳ ಪೈಕಿ ಕೆಲವು ರುಜುವಾತಾಗಿರುವುದಿಲ್ಲ ಉಳಿದವು ಗಂಭೀರವಾಗಿ ಪರಗಣಿಸುವಂತಹ ಆರೋಪಗಳಾಗಿರುವುದಿಲ್ಲ ಇದರಿಂದಾಗಿ ಸಂಸ್ಥೆಗೆ ಯಾವುದೇ ರೀತಿಯ ಆರ್ಥಿಕ/ ಆಡಳಿತಾತ್ಮಕ ನಷ್ಟ ಉಂಟಾಗಿರುವುದಿಲ್ಲವೆಂದನ್ನು ಸಭೆಯಲ್ಲಿ ಪರಿಗಣಿಸಿ ಸದರಿಯವರ ಮೇಲಿದ್ದ ದೂರಿನ ವಿಚಾರಣಾ ಕಡತವನ್ನು ಮುಕ್ತಾಯಗೊಳಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>ಮುಂದುವರೆದು ಡಾ. ಸುಧಾ.ಟಿ.ಆರ್.ರವರು ಪ್ರಸ್ತುತ ತಮ್ಮ ವಿಭಾಗದಲ್ಲಿ ಉತ್ತಮ ಕರ್ತವ್ಯವನ್ನು ನಿರ್ವಹಿಸುತ್ತಿಸುತ್ತಿದ್ದು ಸದರಿಯವರು ದಿನಾಂಕ:5–11–2010ರಂದು ಪ್ರಾಧ್ಯಾಪಕರ ಹುದ್ದೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಇವರು ಈ ಅವಧಿಯಲ್ಲಿ ಇಲಾಖಾ ಪರೀಕ್ಷೆಗಳನ್ನು ಹಾಗೂ ಕನ್ನಡ ಪರೀಕ್ಷೆಯನ್ನು ಪೂರ್ಣಗೊಳಿಸಿರುವುದರಿಂದ ನಿಯಮಾನುಸಾರ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 05 | ಡಾ.ಕೃಷ್ಣಮೂರ್ತಿ.ವಿ.ಆರ್. ಪ್ರಭಾರಿ ವೈದ್ಯಕೀಯ ಅಧೀಕ್ಷಕರು, ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇವರನ್ನು ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇಲ್ಲಿಗೆ ವೈದ್ಯಕೀಯ ಅಧೀಕ್ಷಕರಾಗಿ ಖಾಯಂಗೊಳಿಸುವಂತೆ, ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿರುವ ಪತ್ರದ ಬಗ್ಗೆ. | ಡಾ. ಕೃಷ್ಣಮೂರ್ತಿ ವಿ. ಆರ್. ಪ್ರಭಾರಿ ವೈದ್ಯಕೀಯ ಅಧೀಕ್ಷಕರಾಗಿ, ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಇವರನ್ನು ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇಲ್ಲಿಗೆ ಪ್ರಭಾರಿ ವೈದ್ಯಕೀಯ ಅಧೀಕ್ಷಕರಾಗಿರುವ ಡಾ. ಕೃಷ್ಣಮೂರ್ತಿ ವಿ.ಆರ್. ಇವರನ್ನು ಖಾಯಂಗೊಳಿಸುವ ವಿಷಯವನ್ನು ಆಡಳಿತ ಮಂಡಳಿ ಸಭೆಗೆ ಕಡತದೊಂದಿಗೆ ಮಂಡಿಸುವಂತೆ ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿರುವ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯ ಬೈಲಾದ ಪ್ರಕಾರ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಪ್ರಾಧ್ಯಾಪಕರಾಗಿರಬೇಕೆಂಬ ನಿಯಮವಿರುತ್ತದೆಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಸಭೆಗೆ ತಿಳಿಸಿದರು ಆದಾಗ್ಯೂ ಡಾ. ಕೃಷ್ಣಮೂರ್ತಿ ವಿ.ಆರ್. ವೈದ್ಯಕೀಯ ಅಧೀಕ್ಷಕರು(ಪ್ರಭಾರ) ಹಿಮ್ಸ್ ಬೋಧಕ ಆಸ್ಪತ್ರೆ, ಹಾಸನ ಇವರು ಕಳೆದ 08 ವರ್ಷಗಳಿಂದ ನಿವಾಸಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ವೈದ್ಯಾಧಿಕಾರಿಯಾಗಿ ಶ್ರದ್ದೆಯಿಂದ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಪರಿಗಣಿಸಿ ಹಾಗೂ ಇವರು ಸುಮಾರು 28 ವರ್ಷಗಳ ಕಾಲ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳಲ್ಲಿ ಆಡಳಿತಾತ್ಮಕ ಅನುಭವವನ್ನು ಹೊಂದಿದ್ದು, ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರವೂ ಅರ್ಹತೆ ಹೊಂದಿರುವು-ದರಿಂದ ಡಾ. ಕೃಷ್ಣಮೂರ್ತಿ.ವಿ.ಆರ್. ಇವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ವೈದ್ಯಕೀಯ ಅಧೀಕ್ಷಕರ ಹುದ್ದೆಯಲ್ಲಿ ಖಾಯಂಗೊಳಿಸಿ ಮುಂದುವರೆಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 06 | ಶ್ರೀಮತಿ ಟಿ.ಆರ್. ಶೀಲಾ ಕೋಂ ನಟರಾಜ್, ಹರಳಹಳ್ಳಿ ಗ್ರಾಮ, ಹಾಸನ ತಾಲ್ಲೂಕು ಹಾಸನ ಇವರಿಗೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಹಾಯಕ ಗ್ರಂಥಪಾಲಕರ ಹುದ್ದೆ ನೀಡುವಂತೆ ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿರುವ ಪತ್ರದ ಬಗ್ಗೆ. | ಶ್ರೀಮತಿ ಟಿ.ಆರ್. ಶೀಲಾ ಕೋಂ ನಟರಾಜ, ಹರಳಹಳ್ಳಿ ಗ್ರಾಮ, ಹಾಸನ ತಾಲ್ಲೂಕು, ಹಾಸನ ಇವರು ಡಿಪ್ಲೋಮಾ ಇನ್ ಲೈಬ್ರರಿಯನ್ ಸೈನ್ಸ್, ವ್ಯಾಸಂಗ ಮುಗಿಸಿದ್ದು, ಇವರ ಕುಟುಂಬ ನಿರ್ವಹಣೆಗೆ ಅನುಕೂಲವಾಗುವಂತೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿ ಸಹಾಯಕ ಗ್ರಂಥಪಾಲಕರ ಹುದ್ದೆ ನೀಡುವ ವಿಷಯವನ್ನು ಆಡಳಿತ ಮಂಡಳಿ ಸಭೆಗೆ ಕಡತದೊಂದಿಗೆ ಮಂಡಿಸುವಂತೆ ಮಾನ್ಯ ಉಪ ಮುಖ್ಯಮಂತ್ರಿಗಳ ಕಛೇರಿಯಿಂದ ಬಂದಿರುವ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಹಾಯಕ ಗ್ರಂಥಪಾಲಕರ ಹುದ್ದೆಯ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಹುದ್ದೆಯು ಸರ್ಕಾರದಿಂದ ಮಂಜೂರಾದ ನಂತರ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು. |
| 07 | ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 25 ಬೋಧಕ ಸಿಬ್ಬಂದಿಗಳು ಕೆ.ಸಿ.ಎಸ್.ಆರ್ ನಿಯಮಾವಳಿ ಹಾಗೂ ಸಂಸ್ಥೆಯ ಬೈಲಾ ಪ್ರಕಾರ 02 ವರ್ಷಗಳ ಸೇವಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದು, ಸದರಿ ವೈದ್ಯರುಗಳು ಎಸ್.ಎಸ್.ಎಲ್.ಸಿಯಲ್ಲಿ ಕನ್ನಡವನ್ನು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

09

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಪ್ರಥಮ ಭಾಷೆಯಾಗಿ ತೇರ್ಗಡೆ ಹೊಂದಿರುತ್ತಾರೆ ಹಾಗೂ ಇಲಾಖಾ ಪರೀಕ್ಷೆಯನ್ನು ಪಾಸು ಮಾಡಿರುತ್ತಾರೆ. ಸದರಿಯವರುಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಇರುವುದಿಲ್ಲ. ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಈ ಕೆಳಕಂಡ ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಮಾಡಿರುವುದನ್ನು ಅನುಮೋದನೆಗಾಗಿ ಆಡಳಿತ ಮಂಡಳಿ ಸಭೆಯ ಮುಂದೆ ವಿಷಯವನ್ನು ಸಂಸ್ಥೆಯ ನಿರ್ದೇಶಕರು ಮಂಡಿಸಿದರು. |

| ಕ್ರ.ಸಂ. | ಹೆಸರು ಮತ್ತು ಪದನಾಮ | ಸೇವೆಗೆ ಸೇರಿದ ದಿನಾಂಕ | ಖಾಯಂ ಪೂರ್ವಸೇವಾವಧಿ ಪೂರ್ಣಗೊಳಿಸಿದ ದಿನಾಂಕ |
|---|---|---|---|
| 1 | ಡಾ.ಗಿರೀಶ್‌ಬಾಬು ಕೆ.ಎಲ್.<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ದಂತ ಚಿಕಿತ್ಸ ವಿಭಾಗ | 05–03–2016<br>ಪೂರ್ವಾಹ್ನ | 04–03–2018<br>ಅಪರಾಹ್ನ |
| 2 | ಡಾ. ಸಂತೋಷ್.ಎಸ್.ವಿ.<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ಮನೋವೈದ್ಯ ಶಾಸ್ತ್ರ ವಿಭಾಗ | 13–04–2015<br>ಪೂರ್ವಾಹ್ನ | 12–04–2017<br>ಅಪರಾಹ್ನ |
| 3 | ಡಾ.ಚವ್ಹಾಣ್ ಪ್ರಮೋದ್ ಬಾಬು,<br>ಸಹಾಯಕ ಪ್ರಾಧ್ಯಾಪಕರು,<br>ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗ | 24–06–2016<br>ಪೂರ್ವಾಹ್ನ | 23–06–2018<br>ಅಪರಾಹ್ನ |
| 4 | ಡಾ. ಅಜಿತ್ ಕುಮಾರ್ .ಕೆ.ಎಸ್,<br>ಸಹಾಯಕ ಪ್ರಾಧ್ಯಾಪಕರು,<br>ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗ | 18–06–2016<br>ಪೂರ್ವಾಹ್ನ | 17–06–2018<br>ಅಪರಾಹ್ನ |
| 5 | ಡಾ. ಸೈಯದ್ ಮೊಹಸಿನ್<br>ಸಹಾಯಕ ಪ್ರಾಧ್ಯಾಪಕರು,<br>ಕೀಲು ಮತ್ತು ಮೂಳೆ ಚಿಕಿತ್ಸಾ ವಿಭಾಗ | 16–06–2016<br>ಪೂರ್ವಾಹ್ನ | 15–06–2018<br>ಅಪರಾಹ್ನ |
| 6 | ಡಾ. ರಶ್ಮಿ. ಹೆಚ್.ಡಿ.<br>ಸಹಾಯಕ ಪ್ರಾಧ್ಯಾಪಕರು,<br>ಅರವಳಿಕೆ ವಿಭಾಗ | 16–06–2016<br>ಪೂರ್ವಾಹ್ನ | 15–06–2018<br>ಅಪರಾಹ್ನ |
| 7 | ಡಾ. ಮಾನಸದಾಸ್<br>ಸಹಾಯಕ ಪ್ರಾಧ್ಯಾಪಕರು, | 16–06–2016<br>ಪೂರ್ವಾಹ್ನ | 15–06–2018<br>ಅಪರಾಹ್ನ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ | | | |
|---|---|---|---|---|---|
| | | | ರೋಗಲಕ್ಷಣ ಶಾಸ್ತ್ರ ವಿಭಾಗ | | |
| | | 8 | ಡಾ. ಪ್ರದೀಪ್ ವೈ.ಎಮ್.<br>ಸಹಾಯಕ ಪ್ರಾಧ್ಯಾಪಕರು,<br>ಶಸ್ತ್ರ ಚಿಕಿತ್ಸಾ ವಿಭಾಗ | 25-06-2016<br>ಪೂರ್ವಾಹ್ನ | 24-06-2018<br>ಅಪರಾಹ್ನ |
| | | 9 | ಡಾ. ವೇಣುಗೋಪಾಲ್<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯಶಾಸ್ತ್ರ ವಿಭಾಗ | 16-06-2016<br>ಪೂರ್ವಾಹ್ನ | 15-06-2018<br>ಅಪರಾಹ್ನ |
| | | 10 | ಡಾ. ಸಚಿನ್<br>ಸಹಾಯಕ ಪ್ರಾಧ್ಯಾಪಕರು,<br>ಶಸ್ತ್ರ ಚಿಕಿತ್ಸಾ ವಿಭಾಗ | 1-02-2017<br>ಪೂರ್ವಾಹ್ನ | 31-01-2019<br>ಅಪರಾಹ್ನ |
| | | 11 | ಡಾ. ಮುತ್ತುರಾಜ್ ಎನ್.<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯಶಾಸ್ತ್ರ ವಿಭಾಗ | 30-01-2017<br>ಪೂರ್ವಾಹ್ನ | 29-01-2019<br>ಅಪರಾಹ್ನ |
| | | 12 | ಡಾ. ತಿರುಮಲೇಶ್ವರ .ಎಮ್.<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯಶಾಸ್ತ್ರ ವಿಭಾಗ | 06-02-2017<br>ಪೂರ್ವಾಹ್ನ | 05-02-2019<br>ಅಪರಾಹ್ನ |
| | | 13 | ಡಾ. ಶಂಕರ್ ಲಾಲ್.ಜೆ.<br>ಸಹಾಯಕ ಪ್ರಾಧ್ಯಾಪಕರು,<br>ಶಸ್ತ್ರ ಚಿಕಿತ್ಸಾ ವಿಭಾಗ | 02-02-2017<br>ಪೂರ್ವಾಹ್ನ | 01-02-2019<br>ಅಪರಾಹ್ನ |
| | | 14 | ಡಾ. ಗಿರೀಶ್. ಸಿ.ಎನ್.<br>ಸಹಾಯಕ ಪ್ರಾಧ್ಯಾಪಕರು,<br>ಅರವಳಿಕೆ ವಿಭಾಗ | 02-02-2017<br>ಪೂರ್ವಾಹ್ನ | 01-02-2019<br>ಅಪರಾಹ್ನ |
| | | 15 | ಡಾ. ನ್ಯಾನ್ಸಿ ಪೌಲ್<br>ಹಿರಿಯ ಸ್ಥಾನಿಯ ವೈದ್ಯರು,<br>ಓ.ಬಿ.ಜಿ ವಿಭಾಗ, | 1-04-2015<br>ಪೂರ್ವಾಹ್ನ | 31-03-2017<br>ಅಪರಾಹ್ನ |
| | | 16 | ಡಾ. ಮಧುರ ಕೆ.ಎಲ್.<br>ಹಿರಿಯ ಸ್ಥಾನಿಯ ವೈದ್ಯರು,<br>ಮಕ್ಕಳ ಚಿಕಿತ್ಸಾ ವಿಭಾಗ, | 16-06-2016<br>ಪೂರ್ವಾಹ್ನ | 15-06-2018<br>ಅಪರಾಹ್ನ |
| | | 17 | ಡಾ. ವಿವೇಕಾನಂದ ಇಟ್ಟಿಗಿ,<br>ಹಿರಿಯ ಸ್ಥಾನಿಯ ವೈದ್ಯರು,<br>ಚರ್ಮ ಮತ್ತು ಲೈಂಗಿಕ ಚಿಕಿತ್ಸಾ ವಿಭಾಗ | 31-01-2017<br>ಪೂರ್ವಾಹ್ನ | 30-01-2019<br>ಅಪರಾಹ್ನ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|

| | | | |
|---|---|---|---|
| 18 | ಡಾ. ವೆಂಕಟೇಶ್. ಕೆ.ವಿ.<br>ಹಿರಿಯ ಸ್ಥಾನಿಯ ವೈದ್ಯರು,<br>ವೈದ್ಯಶಾಸ್ತ್ರ ವಿಭಾಗ | 01–06–2017<br>ಪೂರ್ವಾಹ್ನ | 31–05–2019<br>ಅಪರಾಹ್ನ |
| 19 | ಡಾ. ನಿತಿನ್ ಕುಮಾರ್ ಚೌವ್ಹಾಣ,<br>ಸಹಾಯಕ ಪ್ರಾಧ್ಯಾಪಕರು,<br>ಶಸ್ತ್ರಚಿಕಿತ್ಸಾ ವಿಭಾಗ | 05–6–2017<br>ಪೂರ್ವಾಹ್ನ | 4–6–2019<br>ಅಪರಾಹ್ನ |
| 20 | ಡಾ.ವಿನಯ್ ಹೆಚ್.ಡಿ.<br>ಸಹಾಯಕ ಪ್ರಾಧ್ಯಾಪಕರು,<br>ಶಸ್ತ್ರಚಿಕಿತ್ಸಾ ವಿಭಾಗ | 1–2–2017<br>ಅಪರಾಹ್ನ | 1–2–2019<br>ಪೂರ್ವಾಹ್ನ |
| 21 | ಡಾ.ಪ್ರೀತಾ ನಾಯ್ಕ್<br>ಸಹಾಯಕ ಪ್ರಾಧ್ಯಾಪಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 2–6–2017<br>ಪೂರ್ವಾಹ್ನ | 1–6–2019<br>ಅಪರಾಹ್ನ |
| 22 | ಡಾ.ದೀಪ್ತಿ ಕೃಷ್ಣನ್<br>ಹಿರಿಯ ಸ್ಥಾನಿಯ ವೈದ್ಯರು<br>ಟಿ.ಬಿ.& ಚೆಸ್ಟ್ ವಿಭಾಗ | 30–1–2017<br>ಅಪರಾಹ್ನ | 30–1–2019<br>ಪೂರ್ವಾಹ್ನ |
| 23 | ಡಾ. ಸುರೇಶ್. ಆರ್.ಎಮ್.<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ವೈದ್ಯಶಾಸ್ತ್ರ ವಿಭಾಗ,<br>ಹಿಮ್ಸ್, ಹಾಸನ. | 15–12–2010<br>ಪೂರ್ವಾಹ್ನ | 14–12–2012<br>ಅಪರಾಹ್ನ |
| 24 | ಡಾ. ಕವಿತಾ. ಸಿ.ವಿ<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ನೇತ್ರ ಶಾಸ್ತ್ರ ವಿಭಾಗ,<br>ಹಿಮ್ಸ್, ಹಾಸನ. | 15–12–2010<br>ಪೂರ್ವಾಹ್ನ | 14–12–2012<br>ಅಪರಾಹ್ನ |
| 25 | ಡಾ. ಸುದರ್ಶನ್. ಸಿ.ಆರ್.<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ಶರೀರ ಕ್ರಿಯಾ ಶಾಸ್ತ್ರವಿಭಾಗ,<br>ಹಿಮ್ಸ್, ಹಾಸನ. | 5–2–2011<br>ಪೂರ್ವಾಹ್ನ | 4–2–2013<br>ಅಪರಾಹ್ನ |

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 25 ಬೋಧಕ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾ ಅವಧಿಯನ್ನು ಆಡಳಿತ ಮಂಡಳಿ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಘೋಷಣೆ ಮಾಡಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 08 | ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಸಂಸ್ಥೆಯ ವಿವಿಧ ವೃಂದದ ಬೋಧಕೇತರ ಸಿಬ್ಬಂದಿವರ್ಗದವರಿಗೆ ತಡೆಹಿಡಿಯಲಾಗಿರುವ ಎಲ್ಲಾ ಸೇವಾ ಸೌಲಭ್ಯಗಳು (ಖಾ.ಪೂ.ಸೇ ಘೋಷಣೆ, ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆ) ಹಾಗೂ ಬಾಕಿ ಇರುವ ಆರ್ಥಿಕ ಸೌಲಭ್ಯವನ್ನು ಆಡಳಿತ ಮಂಡಳಿತ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಮಂಜೂರು ಮಾಡಿರುವುದನ್ನು ಅನುಮೋದಿಸುವ ಬಗ್ಗೆ. | 1) ಸಂಸ್ಥೆಯ 8ನೇ ಆಡಳಿತ ಮಂಡಳಿ ತೀರ್ಮಾನದಂತೆ ವಿವಿಧ ವೃಂದದ 307 ಬೋಧಕೇತರ ಸಿಬ್ಬಂದಿಗಳ ಖಾಯಂ ನೇಮಕಾತಿ ಸಂಬಂಧ ದಿನಾಂಕ:09-09-2009 ರಂದು ಅಧಿಸೂಚನೆ ಹೊರಡಿಸಿ ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಆಯ್ಕೆಯಾದ 307 ಅಭ್ಯರ್ಥಿಗಳಿಗೆ ದಿನಾಂಕ: 09-08-2010ರಂದು ನೇಮಕಾತಿ ಆದೇಶ ಜಾರಿಗೊಳಿಸಿದ್ದು, ಸದರಿ ನೌಕರರುಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಮಾಧ್ಯಮಗಳಲ್ಲಿ ನೇಮಕಾತಿ ವಿಚಾರದಲ್ಲಿ ಕೆಲವೊಂದು ದೂರುಗಳು ಪ್ರಕಟವಾದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಸಂಸ್ಥೆಯು ಮಾಡಿದ್ದ ನೇಮಕಾತಿಯನ್ನು ದಿನಾಂಕ:26-08-2010ರಂದು ರದ್ದು ಮಾಡಿತ್ತು. ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಸಂಸ್ಥೆಯಿಂದ ವಜಾಗೊಂಡ ನೌಕರರು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುತ್ತಾರೆ.<br>2) ಮಾನ್ಯ ಘನ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಸಂಖ್ಯೆ:27062-2010/2010ರಲ್ಲಿ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ್ದರು ಸಹ ರಿಟ್ ಅರ್ಜಿದಾರರನ್ನು ಕರ್ತವ್ಯದಿಂದ ಹೊರಗಿಟ್ಟಿರುವುದರ ಬಗ್ಗೆ ಅಸಮಧಾನ ವ್ಯಕ್ತಪಡಿಸಿ ಅರ್ಜಿದಾರರು ನ್ಯಾಯಾಲಯ ನಿಂದನೆ ಅರ್ಜಿ ಸಲ್ಲಿಸಬಹುದೆಂದು ದಿನಾಂಕ: 3-08-2011ರ ಆದೇಶದಲ್ಲಿ ನಿರ್ದೇಶಿಸಿದ್ದರಿಂದ ರಾಜ್ಯ ಸರ್ಕಾರವು ದಿನಾಂಕ: 19-10-2011ರಂದು ವಜಾಗೊಂಡ ಎಲ್ಲಾ ನೌಕರರುಗಳನ್ನು ಕರ್ತವ್ಯದ ಮೇಲೆ ಹಾಜರಾಗುವಂತೆ ಆದೇಶಿಸಿದ್ದು, ವಜಾಗೊಂಡ ಎಲ್ಲಾ ನೌಕರರುಗಳು ಮರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಅರ್ಜಿಯ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದ ರಿಟ್ ಅರ್ಜಿ ಸಂಖ್ಯೆ:19586-621ರ ಅರ್ಜಿಯನ್ನು ಡಿಸ್‌ಪೋಸ್ ಮಾಡಿ ನ್ಯಾಯಾಲಯದ ನಿರ್ದೇಶನದಂತೆ ನಿಯಮಾನುಸಾರ ಕ್ರಮ ಕೈಗೊಂಡು 08 ವಾರಗಳಲ್ಲಿ ವರದಿ ಸಲ್ಲಿಸುವಂತೆ ದಿನಾಂಕ:19-12-2014ರಂದು ರಾಜ್ಯ ಸರ್ಕಾರಕ್ಕೆ ಸೂಚಿಸಿರುತ್ತದೆ.<br>3) ರಾಜ್ಯ ಸರ್ಕಾರವು ಎಲ್ಲಾ ಬೆಳವಣಿಗೆಯನ್ನು ಪರಿಶೀಲಿಸಿ ಸಂಸ್ಥೆಯಲ್ಲಿ ಪ್ರಸ್ತುತ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ★ ಹಾಸನ ★
13

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದಗಳ 307 ಬೋಧಕೇತರ ಸಿಬ್ಬಂದಿಗಳು ಮತ್ತು ಸಂಸ್ಥೆಯ 11 ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ಸಂಸ್ಥೆಯು 2ನೇ ಬಾರಿ ಪ್ರಕಟಿಸಲಾಗಿದ್ದ ಮೆರಿಟ್ ಪಟ್ಟಿಯು ಸೇರಿದಂತೆ ಎಲ್ಲಾ ನೇಮಕಾತಿಗಳನ್ನು ದಿನಾಂಕ: 19–11–2015ರಂತೆ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ, ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಬೋಧಕೇತರ ಹುದ್ದೆಗಳಿಗೆ ಹೊಸದಾಗಿ ನೇಮಕಾತಿ ಮಾಡಿ ಅವರುಗಳು ಕರ್ತವ್ಯಕ್ಕೆ ಹಾಜರಾಗುವವರೆಗೂ ಪ್ರಸ್ತುತ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳನ್ನು ಅವರುಗಳು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳಲ್ಲಿಯೇ ಮುಂದುವರೆಸುವುದೆಂದು ಆದೇಶ ಹೊರಡಿಸಿರುತ್ತದೆ. ಸರ್ಕಾರವು ದಿನಾಂಕ:19–11–2015ರಂದು 2ನೇ ಬಾರಿ ನೇಮಕಾತಿಯನ್ನು ವಜಾಗೊಳಿಸಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಕರ್ತವ್ಯ ನಿರತ ಬೋಧಕೇತರ ಸಿಬ್ಬಂದಿಗಳು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ದಿನಾಂಕ:3–12–2015ರಂದು ರಾಜ್ಯ ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ತಂದಿರುತ್ತಾರೆ.<br>4) ಮಾನ್ಯ ಘನ ಉಚ್ಛ ನ್ಯಾಯಾಲಯದಲ್ಲಿ ಸದರಿ ಅರ್ಜಿಯ ಬಗ್ಗೆ ವಿಚಾರಣೆ ನಡೆದಿದ್ದು, ಸದರಿ ನೇಮಕಾತಿಯಲ್ಲಿ ಯಾವುದೇ ನಿಯಮಗಳು ಉಲ್ಲಂಘನೆಯಾಗಿಲ್ಲವೆಂದು ಪರಿಗಣಿಸಿ ದಿನಾಂಕ:19–11–2015ರಂದು ರಾಜ್ಯ ಸರ್ಕಾರವು ಹೊರಡಿಸಿದ್ದ ಸಿಬ್ಬಂದಿಗಳ ವಜಾ ಆದೇಶ ಮತ್ತು ಈ ನೇಮಕಾತಿಯ ಬಗ್ಗೆ ಆಕ್ಷೇಪಣೆ ಇದ್ದ ಇತರೆ ಅರ್ಜಿಗಳನ್ನು ಒಳಗೊಂಡಂತೆ ಎಲ್ಲಾ ಅರ್ಜಿಗಳನ್ನು ವಜಾ ಮಾಡಿ ಸದರಿ 307 ಸಿಬ್ಬಂದಿಗಳಿಗೆ ನ್ಯಾಯೋಚಿತವಾಗಿ ಸಲ್ಲಬೇಕಾದ ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡಬೇಕೆಂದು ದಿನಾಂಕ:28–11–2018ರಂದು ಆದೇಶ ನೀಡಿರುತ್ತದೆ.<br>ಸಂಸ್ಥೆಯಲ್ಲಿ ಪ್ರಸ್ತುತ ಕರ್ತವ್ಯ ನಿರತ ಸಂಬಂಧಿಸಿದ ಬೋಧಕೇತರ ಸಿಬ್ಬಂದಿವರ್ಗದವರು (ಪಿಟಿಷನ್‌ದಾರರು) ದಿನಾಂಕ:15–12–2018ರಂದು ಸಂಸ್ಥೆಗೆ ಮನವಿ ಸಲ್ಲಿಸಿ ನ್ಯಾಯಾಲಯದ ತೀರ್ಪಿನಂತೆ ತಮಗೆ ಬಾಕಿ ಇರುವ ಸೇವಾ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಸೌಲಭ್ಯಗಳನ್ನು ಕೋರಿದ್ದರ ಹಿನ್ನೆಲೆಯಲ್ಲಿ ಸಂಸ್ಥೆಯ ಏಕ ಕಡತದ ಸಂಖ್ಯೆ: ಹಿಮ್ಸ್/ಉ.ನ್ಯಾಯಾಲಯ/80/2018-19ರ ಕಡತದಲ್ಲಿ ಸಂಸ್ಥೆಯ ಹಂತದಲ್ಲಿ ತೆಗೆದು ಕೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ನಿರ್ದೇಶನ ಕೋರಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆಕುಕ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರುರವರಿಗೆ ದಿನಾಂಕ:20-12-2018ರಂದು ಸಮುಚ್ಛಿತ ಮಾರ್ಗದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.<br>ಈ ಬಗ್ಗೆ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಕುಕ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರುರವರು ಪತ್ರ ಸಂಖ್ಯೆ: ಆಕುಕ 305 ಕೆವಿಎಂ 2015 ಬೆಂಗಳೂರು ದಿನಾಂಕ:23-08-2019ರ ಪತ್ರದಲ್ಲಿ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದದ ಸಿಬ್ಬಂದಿಗಳ ನೇಮಕಾತಿ ಪ್ರಾಧಿಕಾರವು ಸಂಸ್ಥೆಯ ಬೈಲಾ ಪ್ರಕಾರ ಸಂಸ್ಥೆಯ ನಿರ್ದೇಶಕರೇ ಆಗಿರುವುದರಿಂದ ನ್ಯಾಯಾಲಯದ ಈ ತೀರ್ಪಿನ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ತಮ್ಮ ಹಂತದಲ್ಲಿಯೇ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ.<br>ಈ ಹಿನ್ನೆಲೆಯಲ್ಲಿ ಹಾಗೂ ಸರ್ಕಾರದ ನಿರ್ದೇಶದನ್ವಯ ಕ್ರಮವಹಿಸಲು ಸಂಸ್ಥೆಯ ಕಾನೂನು ತಜ್ಞರ ಅಭಿಪ್ರಾಯ ಕೋರಿದ್ದು, ಸಂಸ್ಥೆಯ ವಕೀಲರು ಆಯ್ಕೆ ಸಮಿತಿಯು ನೀಡಿರುವ ಅಂಕಗಳನ್ನು ಪರಿಶೀಲಿಸಿರುವುದಾಗಿ ಮತ್ತು ಕೃಪಾಂಕ ನೀಡಿರುವ ಪ್ರಕ್ರಿಯೆಯನ್ನು ಪರಿಶೀಲಿಸುವ ಅಗತ್ಯವಿಲ್ಲವೆಂದು ಹಾಗೂ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವಲ್ಲಿ ಯಾವುದೇ ಕಾನೂನಿನ ತೊಡಕು ಇಲ್ಲವೆಂದು ಅಭಿಪ್ರಾಯಿಸಿರುತ್ತಾರೆ.<br>ನ್ಯಾಯಾಲಯದ ಆದೇಶವನ್ನು ಪಾಲಿಸಲು ಯಾವುದೇ ಕಾನೂನು ತೊಡಕು ಇಲ್ಲವೆಂದು ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಸದರಿ ಸಿಬ್ಬಂದಿ ವರ್ಗದವರಿಗೆ ಈ ತನಕ ತಡೆಹಿಡಿಯಲಾಗಿರುವ ಎಲ್ಲಾ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಲು ಹಾಗೂ ಬಾಕಿ ಆರ್ಥಿಕ ಸೌಲಭ್ಯಗಳನ್ನು ಪಾವತಿಸಲು ತೀರ್ಮಾನಿಸಿ, ಅನುಮೋದನೆಗಾಗಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಕುಕ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಹಾಗೂ ಉಪಾಧ್ಯಕ್ಷರು ಹಿಮ್ಸ್, ಆಡಳಿತ ಮಂಡಳಿ ಇವರಿಗೆ ಪುನರ್ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಏಕಕಡತವನ್ನು ದಿನಾಂಕ:12–09–2019ರಂದು ಮಂಡಿಸಲಾಯಿತು. ಸದರಿ ಏಕ ಕಡತದ ಕಂಡಿಕೆ (33)ರಲ್ಲಿ ಈ ಪ್ರಸ್ತಾವನೆಯನ್ನು ಘನ ನ್ಯಾಯಾಲಯದ ಆದೇಶ ಉಲ್ಲೇಖಿಸಿ ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಮಾನ್ಯ ಉಪ ಕಾರ್ಯದರ್ಶಿಗಳು, ವೈ.ಶಿ ಇವರು ಸೂಚಿಸಿರುತ್ತಾರೆ.<br>"ಘನ ಉಚ್ಛ ನ್ಯಾಯಾಲಯದ ತೀರ್ಪು 2018ರ ನವೆಂಬರ್‌ನಲ್ಲೇ ಪ್ರಕಟವಾಗಿದ್ದು ಕಾರಣಾಂತರಗಳಿಂದ ಸಂಸ್ಥೆಯು ಆಡಳಿತ ಮಂಡಳಿ ಸಭೆಯು ವಿಳಂಬವಾಗುತ್ತಿರುವುದರಿಂದ ಸದರಿ ತೀರ್ಪಿನ ಅನುಷ್ಠಾನ ವಿಳಂಬವಾದಲ್ಲಿ ಸಂಬಂಧಿಸಿದ ಸಿಬ್ಬಂದಿಗಳು ನ್ಯಾಯಾಂಗ ನಿಂದನೆಗೆ ಅರ್ಜಿ ಸಲ್ಲಿಸುವ ಅವಕಾಶವಿರುವುದರಿಂದ ತೆಗೆದುಕೊಂಡಿರುವ ತೀರ್ಮಾನವನ್ನು ಆಡಳಿತ ಮಂಡಳಿ ಘಟನೋತ್ತರ ಅನುಮೋದನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಪುನರ್ ಆದೇಶಕ್ಕೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಹಾಗೂ ಉಪಾಧ್ಯಕ್ಷರು ಆಡಳಿತ ಮಂಡಳಿ ಹಿಮ್ಸ್, ಹಾಸನರವರಿಗೆ ಏಕ ಕಡತ ಸಂಖ್ಯೆ: ಹಿಮ್ಸ್ /ಉ.ನ್ಯಾಯಾಲಯ/80/2018–19 ಕಂಡಿಕೆ (34)ರಲ್ಲಿ ಸಲ್ಲಿಸಲಾಗಿ ಸದರಿಯವರು ಕಡತದ ಕಂಡಿಕೆ (36)ರಲ್ಲಿ ಅನುಮೋದನೆ ನೀಡಿ ಸನ್ಮಾನ್ಯ ಮುಖ್ಯಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಹಿಮ್ಸ್, ಹಾಸನ ಇವರ ಅನುಮೋದನೆಗಾಗಿ ಕಡತವನ್ನು ಸಲ್ಲಿಸಿದ್ದು, ಮಾನ್ಯ ಮುಖ್ಯಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಹಿಮ್ಸ್, ಹಾಸನ ಇವರು ಸಂಸ್ಥೆಯ ಏಕಕಡತ ಸಂಖ್ಯೆ:ಹಿಮ್ಸ್/ಉ.ನ್ಯಾಯಾಲಯ/80/2018–19ರ ಏಕಕಡತದ ಕಂಡಿಕೆ (37)ರಲ್ಲಿ ಅನುಮೋದಿಸಿರುತ್ತಾರೆ".<br>ಮುಂದುವರೆದು 307 ಬೋಧಕೇತರ ಸಿಬ್ಬಂದಿಗಳ ಪೈಕಿ ಪ್ರಸ್ತುತ ಸಂಸ್ಥೆಯಲ್ಲಿ ಕಾರ್ಯನಿರತ 244 ಸಿಬ್ಬಂದಿಗಳಲ್ಲಿ 3 ಜನ ರಿಟ್ ಅರ್ಜಿ ಸಲ್ಲಿಸದೆ ಇರುವ ನೌಕರರನ್ನು ಹೊರತುಪಡಿಸಿ, ಈ ಕೆಳಕಂಡ 241 ವಿವಿಧ ವೃಂದದ ಬೋಧಕೇತರ ಸಿಬ್ಬಂದಿಗಳಿಗೆ (ರಿಟ್ ಪಿಟಿಷನ್‌ದಾರರು) ಘನ ಉಚ್ಛ ನ್ಯಾಯಾಲಯದ ಆದೇಶದಂತೆ ಮಾನ್ಯ ಮುಖ್ಯಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಆಡಳಿತ ಮಂಡಳಿ ಹಿಮ್ಸ್, ಹಾಸನ ಇವರು ಏಕಕಡತದ ಕಂಡಿಕೆ (37)ರಲ್ಲಿ ಅನುಮೋದಿಸಿರುವಂತೆ ಸಂಸ್ಥೆಯ ವಿವಿಧ ವೃಂದದ ಬೋಧಕೇತರ ಸಿಬ್ಬಂದಿವರ್ಗದವರಿಗೆ ತಡೆಹಿಡಿಯಲಾಗಿರುವ ಎಲ್ಲಾ ಸೇವಾ ಸೌಲಭ್ಯಗಳು ಖಾ.ಪೂ.ಸೇ ಘೋಷಣೆ, ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆ ಹಾಗೂ ಬಾಕಿ ಇರುವ ಆರ್ಥಿಕ ಸೌಲಭ್ಯವನ್ನು ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಈಗಾಗಲೇ ಮಂಜೂರು ಮಾಡಲು ಕ್ರಮ ವಹಿಸಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ವಿಷಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಮಾನ್ಯ ಮುಖ್ಯಮಂತ್ರಿಗಳು, ಮತ್ತು ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ ಹಿಮ್ಸ್, ಹಾಸನ ಇವರು ಸಂಸ್ಥೆಯ ಏಕ ಕಡತ ಕಂಡಿಕೆ (37)ರಲ್ಲಿ ಅನುಮೋದಿಸಿರುವಂತೆ ಸಂಸ್ಥೆಯ ವಿವಿಧ ವೃಂದದ ಬೋಧಕೇತರ ಸಿಬ್ಬಂದಿವರ್ಗದವರಿಗೆ ತಡೆಹಿಡಿಯಲಾಗಿರುವ ಎಲ್ಲಾ ಸೇವಾ ಸೌಲಭ್ಯಗಳು ಖಾ.ಪೂ.ಸೇ ಘೋಷಣೆ, ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳ ಬಿಡುಗಡೆ ಹಾಗೂ ಬಾಕಿ ಇರುವ ಆರ್ಥಿಕ ಸೌಲಭ್ಯವನ್ನು ನೀಡಲು ಆಡಳಿತ ಮಂಡಳಿ ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು ಹಾಗೂ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯ ನಿರೀಕ್ಷಣೆ ಮೇರೆಗೆ ಸಂಸ್ಥೆಯ ಹಂತದಲ್ಲಿ ಈಗಾಗಲೇ ತೆಗೆದುಕೊಂಡಿರುವ ಕ್ರಮವನ್ನು ಸಹ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 09 | ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಯಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಬೈಲಾಗೆ ತಿದ್ದುಪಡಿ ಮತ್ತು ಬಿ.ಎಮ್.ಸಿ.ಆರ್.ಐ.ನಲ್ಲಿ ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿ ಕೊಳ್ಳುವ | ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಸ್ವಾಯತ್ತ ಸಂಸ್ಥೆಯಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು<br>1)Karnataka Medical Departments Services (Recruitment) (Admentment) Rules 1988ನ್ನು ಅಳವಡಿಸಿಕೊಳ್ಳಲು ಹಾಗೂ ಈ ಕುರಿತು ಬೈಲಾಗೆ ತಿದ್ದುಪಡಿ ಮಾಡಲು ಮತ್ತು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
| --- | --- | --- |
| | ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸುವಂತೆ ಸರ್ಕಾರದಿಂದ ಬಂದಿರುವ ಪತ್ರದ ಬಗ್ಗೆ. | 2) ಶುಶ್ರೂಷಕರ ವೃಂದಕ್ಕೆ ಸಂಬಂಧಿಸಿದಂತೆ ಬಿ.ಎಮ್.ಸಿ.ಆರ್.ನಲ್ಲಿ ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸರ್ಕಾರದ ಪತ್ರ ಸಂಖ್ಯೆ: ಆಕುಕ 262 ಎಂಎಸ್ಎಫ್ 2018(ಭಾಗ-1), ದಿನಾಂಕ:05-12-2019. ಸರ್ಕಾರದಿಂದ ನಿರ್ದೇಶನ ಬಂದಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಹಾಸನವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಮಂಜೂರಾಗಿರುವ ಶುಶ್ರೂಷಕ ಹುದ್ದೆಗಳನ್ನು ಭರ್ತಿ ಮಾಡಲು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರವು ಅಳವಡಿಸಿಕೊಂಡಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಲ್ಪ ಬದಲಾವಣೆಯೊಂದಿಗೆ ಅನುಬಂಧದಲ್ಲಿ ಲಗತ್ತಿಸಿರುವಂತೆ ಅಳವಡಿಸಿಕೊಂಡು ಶುಶ್ರೂಷಕರ ನೇಮಕಾತಿಯನ್ನು ಮಾಡಿಕೊಳ್ಳಲು ಹಿಮ್ಸ್ ಬೈಲಾಗೆ ಅಗತ್ಯ ತಿದ್ದುಪಡಿ ಮಾಡಲು ಆಡಳಿತ ಮಂಡಳಿಯು ಸರ್ವಾನುಮತದಿಂದ ಅನುಮೋದಿಸಿತು. |
| 10 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇದ್ದ ನಿರ್ದೇಶಕರ ಹುದ್ದೆಯ ನೇಮಕಾತಿ ಸಂಬಂಧ ದಿನಾಂಕ: 27-11-2019ರಂದು ನಡೆದ ಸಂಸ್ಥೆಯ ನಿರ್ದೇಶಕರ ನೇರ ನೇಮಕಾತಿ ಸಂದರ್ಶನದಲ್ಲಿ ಆಯ್ಕೆ ಸಮಿತಿಯು ಹಿಮ್ಸ್ ಸಂಸ್ಥೆಗೆ ನಿರ್ದೇಶಕರನ್ನಾಗಿ ಆಯ್ಕೆಮಾಡುವ ಬಗ್ಗೆ ಶಿಫಾರಸ್ಸು ಮಾಡಿರುವ ನಡವಳಿಯನ್ನು ಪರಿಶೀಲಿಸುವ ಹಾಗೂ ಅನುಮೋದಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇದ್ದ ನಿರ್ದೇಶಕರ ಹುದ್ದೆಯ ನೇಮಕಾತಿ ಸಂಬಂಧ ದಿನಾಂಕ:27-11-2019 ರಂದು ನಡೆದ ಸಂಸ್ಥೆಯ ನಿರ್ದೇಶಕರ ನೇರ ನೇಮಕಾತಿ ಸಂದರ್ಶನದಲ್ಲಿ ಆಯ್ಕೆ ಸಮಿತಿಯು ಹಿಮ್ಸ್ ಸಂಸ್ಥೆಗೆ ನಿರ್ದೇಶಕರನ್ನಾಗಿ ಆಯ್ಕೆಮಾಡುವ ಬಗ್ಗೆ ಶಿಫಾರಸ್ಸು ಮಾಡಿರುವ ನಡವಳಿಯನ್ನು ಪರಿಶೀಲಿಸುವ ಹಾಗೂ ಅನುಮೋದಿಸುವ ಸಲುವಾಗಿ ದಿನಾಂಕ:06-12-2019ರಂದು 32ನೇ ಆಡಳಿತ ಮಂಡಳಿಯ ಸಭೆಯನ್ನು ನಿಗದಿ ಪಡಿಸಲಾಗಿದ್ದು, ಹಿಮ್ಸ್ ಆಡಳಿತ ಮಂಡಳಿಯ ಸಭೆಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಂಸ್ಥೆಯ ಪ್ರಭಾರ ನಿರ್ದೇಶಕರು ಸಹ ನಿರ್ದೇಶಕರ ಆಯ್ಕೆಯಲ್ಲಿ ಒಬ್ಬ ಅಭ್ಯರ್ಥಿಯಾಗಿರುವುದರಿಂದ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು ಆಡಳಿತ ಮಂಡಳಿ, ಹಿಮ್ಸ್, ಹಾಸನ ಇವರಿಂದ ಅನುಮತಿ ಪಡೆದು ಸಭೆಯಿಂದ ನಿರ್ಗಮಿಸಿದರು.<br>ಮಾನ್ಯ ಅಧ್ಯಕ್ಷರು ಈ ಹಿಂದೆಯೇ ಸೂಚನೆ ನೀಡಿದಂತೆ ನೇಮಕಾತಿ ಸಭೆಯ ನಡವಳಿ ಹಾಗೂ ಅಂಕ ಪಟ್ಟಿಗಳನ್ನು ಒಂದು ಲಕೋಟೆಯಲ್ಲಿಟ್ಟು ಮೊಹರು ಮಾಡಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸುರಕ್ಷಿತವಾಗಿಟ್ಟುಕೊಂಡಿದ್ದ ಲಕೋಟೆಯನ್ನು ಸಭೆಯ ಮುಂದೆ ಮಂಡಿಸಲು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳಿಗೆ ನೀಡಿದ ನಿರ್ದೇಶನದಂತೆ ಸದರಿಯವರು ಮೊಹರು ಮಾಡಿದ ಲಕೋಟೆಯನ್ನು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ ಇವರಿಗೆ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು ಲಕೋಟೆಯನ್ನು ನೀಡಿದ್ದು, ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಲಕೋಟೆಯನ್ನು ತೆರೆದು ಅದರಲ್ಲಿದ್ದ ದಿನಾಂಕ:27-11-2019ರ ನೇಮಕಾತಿ ಸಮಿತಿಯ ಸಭೆ ನಡವಳಿ ಹಾಗೂ ಅಂಕಪಟ್ಟಿಗಳಲ್ಲಿರುವ ಎಲ್ಲಾ ವಿವರಗಳನ್ನು ಮಾನ್ಯ ಅಧ್ಯಕ್ಷರು ಹಾಗೂ ಇತರ ಸದಸ್ಯರುಗಳಿಗೆ ಸವಿವರವಾಗಿ ತಿಳಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಕಂಷವಾಗಿ ಚರ್ಚಿಸಲಾಯಿತು. ಆಯ್ಕೆ ಸಂದರ್ಶನದ ವೇಳೆಯಲ್ಲಿ ಚರ್ಚಿಸಲಾಗಿದ್ದ ಡಾ.ಬಿ.ಸಿ. ರವಿಕುಮಾರ್‌ರವರಿಗೆ ಸಂಬಂಧಿಸಿದಂತೆ ತ್ರಿಸದಸ್ಯ ಸಮಿತಿಯು ನೀಡಿದ್ದ ವರದಿ ಮತ್ತು ಸದರಿ ವರದಿಗೆ ಡಾ. ಬಿ.ಸಿ. ರವಿಕುಮಾರ್‌ರವರು ಲಿಖಿತವಾಗಿ ಸಲ್ಲಿಸಿದ್ದ ಸಮಜಾಯಿಷಿಯನ್ನು ಪರಿಶೀಲಿಸಲು ತೀರ್ಮಾನ ಮಾಡಲಾಯಿತು. ಸಮಜಾಯಿಷಿ ಸಂಬಂಧ ತಾಂತ್ರಿಕ ಅಭಿಪ್ರಾಯ ಪಡೆಯಲು ತೀರ್ಮಾನಿಸಲಾಯಿತು. ದಿನಾಂಕ:27-11-2019ರಂದು ಸಂಸ್ಥೆಯ ನಿರ್ದೇಶಕರ ನೇಮಕಾತಿ ಸಮಿತಿಯು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ನೇಮಕ ಮಾಡಲು ಶಿಫಾರಸ್ಸು ಮಾಡಿರುವ ಡಾ.ಬಿ.ಸಿ.ರವಿಕುಮಾರ್, ನಿರ್ದೇಶಕರು ಹಾಗೂ ಪ್ರಾಂಶುಪಾಲರು, ಹಿಮ್ಸ್, ಹಾಸನರವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ಸಂಸ್ಥೆಯ ಬೈಲಾದ ಅನ್ವಯ 04 ವರ್ಷಗಳ ಅವಧಿಗೆ ನಿರ್ದೇಶಕರ ಹುದ್ದೆಗೆ ನೇಮಕ ಮಾಡಲು ಹಿಮ್ಸ್, ಆಡಳಿತ ಮಂಡಳಿ ಸಭೆಯ ತೀರ್ಮಾನವನ್ನು ತಾಂತ್ರಿಕ ವರದಿ ಪಡೆದ ನಂತರ, ಅನುಷ್ಠಾನಗೊಳಿಸಲು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 11 | ಸಂಸ್ಥೆಯಲ್ಲಿನ ಪ್ರಾಂಶುಪಾಲರ ಹುದ್ದೆಗೆ ಹಿರಿಯ ಪ್ರಾಧ್ಯಾಪಕರನ್ನು ನೇಮಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ ಪ್ರಾಂಶುಪಾಲರ ಹುದ್ದೆಯು ಮಂಜೂರಾಗಿದ್ದು, ಡಾ. ಬಿ.ಸಿ.ರವಿಕುಮಾರ್‌ರವರು ಪ್ರಾಂಶುಪಾಲರ ಹುದ್ದೆಗೆ ಆಯ್ಕೆಯಾಗಿ ದಿನಾಂಕ:15.09.2014ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಡಾ.ಬಿ.ಸಿ.ರವಿಕುಮಾರ್‌ರವರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರ ಹುದ್ದೆಗೆ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ, ತಾತ್ಕಾಲಿಕವಾಗಿ ತೆರವಾಗಿರುವ ಪ್ರಾಂಶುಪಾಲರ ಹುದ್ದೆಗೆ ಸಂಸ್ಥೆಯಲ್ಲಿ 2006ರಿಂದ ನೇಮಕಗೊಂಡು ಹಿರಿಯರಾಗಿರುವ ರೋಗ ಲಕ್ಷಣ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾದ ಡಾ.ನಾಗೇಶ್. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರ.ಸಂ. | ವಿಷಯ | ವಿಷಯ |
|---|---|---|
| | | ಕೆ. ಆರ್. ಇವರನ್ನು ಪ್ರಾಂಶುಪಾಲರ ಹುದ್ದೆಗೆ ಪ್ರಭಾರದಲ್ಲಿರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಸಂಸ್ಥೆಗೆ ಎನ್ಎಬಿಹೆಚ್ ಹಾಗೂ ಎನ್‌ಬಿಎ ಮಾನ್ಯತೆ ಪಡೆಯುವ ಬಗ್ಗೆ. | ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿದ ಮಾನ್ಯ ಸಭಾಧ್ಯಕ್ಷರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು ಒಂದು ವರ್ಷದ ಅವಧಿಯೊಳಗೆ ಸಂಸ್ಥೆಯ ಎಲ್ಲಾ ವಿಭಾಗಗಳು ಎನ್ಎಬಿಹೆಚ್ ಹಾಗೂ ಎನ್‌ಬಿಎಯಿಂದ ಮಾನ್ಯತೆ ಪಡೆಯಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಿದರು.<br>"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

ಡಾ. ಬಿ.ಸಿ. ರವಿಕುಮಾರ್.,
ನಿರ್ದೇಶಕರು, ಹಾಗೂ
ಸದಸ್ಯ ಕಾರ್ಯದರ್ಶಿಗಳು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಜಾವೇದ್ ಅಖ್ತರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಿಮ್ಸ್, ಹಾಸನ.

ಡಾ. ಅಶ್ವಥ್ ನಾರಾಯಣ ಸಿ. ಎನ್.,
ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ
ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಡಾ॥ ಅಶ್ವಥ್ ನಾರಾಯಣ ಸಿ.ಎನ್.
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ)